ಕ್ರೀಡಾ ಇಲಾಖೆಯಿಂದ ಅನುದಾನ ಪಡೆಯುತ್ತಿರುವ ಕ್ರೀಡಾ ಸಂಸ್ಥೆಗಳು

೧೪೭೭. ಶ್ರೀ ಕೆ. ಪ್ರತಾಪ್‌ಚಂದ್ರ ಶೆಟ್ಟಿ (ಕುಂದಾಪುರ).—ಮಾನ್ಯ ಗಣಿ ಮತ್ತು ಭೂ ವಿಜ್ಞಾನ ಹಾಗೂ ಯೋಜನ ಸೇವಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯ ಕ್ರೀಡಾ ಇಲಾಖೆಯಿಂದ ಅನುದಾನ ಪಡೆಯುತ್ತಿರುವ ವಿವಿಧ ಕ್ರೀಡಾ ಸಂಸ್ಥೆಗಳ ವಿವರಗಳೇನು ? (ಸಂಸ್ಥೆಯ ಹೆಸರು ಹಾಗೂ ವಾರ್ಷಿಕ ಅನುದಾನದ ಮೊತ್ತದ ವಿವರಗಳನ್ನು ನೀಡುವುದು).

ಆ) ಈ ಸಂಸ್ಥೆಗಳ ಆರ್ಥಿಕ ವ್ಯವಹಾರಗಳನ್ನು ರಾಜ್ಯದ ಕ್ರೀಡಾ ಇಲಾಖೆ ಯಾವ ರೀತಿ ನಿಯಂತ್ರಿಸುತ್ತದೆ ?

ಇ) ಮೇಲ್ಕಂಡ ಅನುದಾನ ಪಡೆಯುತ್ತಿರುವ ಸಂಸ್ಥೆಗಳಲ್ಲಿ ಎಷ್ಟು ಸಂಸ್ಥೆಗಳು ಸ್ವಂತ ಕ್ರೀಡಾಂಗಣಗಳನ್ನು ಹೊಂದಿದೆ ?

ಶ್ರೀ ಆರ್. ಸಿ. ಜಿಗಜಿಣಗಿ (ಗಣಿ ಮತ್ತು ಭೂ ವಿಜ್ಞಾನ ಹಾಗೂ ಯುವಜನ ಸೇವಾ ಮಂತ್ರಿಗಳು).—

ಅ) ರಾಜ್ಯದಲ್ಲಿ ಕರ್ನಾಟಕ ರಾಜ್ಯ ಕ್ರೀಡಾ ಪರಿಷತ್ತಿನಿಂದ ಮಾನ್ಯತೆ ಪಡೆದ ಒಟ್ಟು ೫೧ ಕ್ರೀಡಾ ಸಂಸ್ಥೆಗಳಿವೆ. ಅವುಗಳ ಪಟ್ಟಿಯನ್ನು ಲಗತ್ತಿಸಿದೆ. ಇವುಗಳಲ್ಲಿ ಕಳೆದ ಮೂರು ವರ್ಷಗಳಲ್ಲಿ ಒಟ್ಟು ಕೊಟ್ಟಿರುವ ಧನಸಹಾಯ ಈ ಕೆಳಕಂಡಂತಿದೆ.

೧) ೧೯೮೫-೮೬ನೇ ಸಾಲಿನಲ್ಲಿ ೩೬ ಕ್ರೀಡಾ ಸಂಸ್ಥೆಗಳಿಗೆ ನೀಡಲಾದ ಧನಸಹಾಯ ರೂ. ೧೦,೫೯,೪೪೮-೫೫

೨) ೧೯೮೬-೮೭ನೇ ಸಾಲಿನಲ್ಲಿ ೩೦ ಸಂಸ್ಥೆಗಳಿಗೆ ರೂ. ೬,೮೦,೩೭೦-೫೫ ಧನ ಸಹಾಯ ನೀಡಲಾಗಿದೆ.

೩) ೧೯೮೭-೮೮ನೇ ಸಾಲಿನಲ್ಲಿ ೧೯ ಸಂಸ್ಥೆಗಳಿಗೆ ರೂ. ೩,೩೫,೭೧೦-೫೫ ಧನಸಹಾಯ ನೀಡಲಾಗಿದೆ.

ಆ) ಸಹಾಯಧನ ಸಂಹಿತೆಯ ನಿಯಮದ ಪ್ರಕಾರ ಈ ಸಂಸ್ಥೆಗಳ ಆರ್ಥಿಕ ವ್ಯವಹಾರಗಳನ್ನು ನಿಯಂತ್ರಿಸಲಾಗುವುದು.

ಇ) ನಾಲ್ಕು ಸಂಸ್ಥೆಗಳು ಸ್ವಂತ ಕ್ರೀಡಾಂಗಣ ಹೊಂದಿದೆ. ಅವುಗಳೆಂದರೆ.—

ಅ) ರಾಜ್ಯ ಫುಟ್‌ಬಾಲ್ ಸಂಸ್ಥೆ.

ಆ) ರಾಜ್ಯ ಕ್ರಿಕೆಟ್ ಸಂಸ್ಥೆ.

ಇ) ರಾಜ್ಯ ಲಾನ್ ಟೆನ್ನಿಸ್ ಸಂಸ್ಥೆ.

ಈ) ರಾಜ್ಯ ಹಾಕಿ ಸಂಸ್ಥೆ.

LIST OF THE SPORTS ASSOCIATIONS

1 Karnataka Amateur Athletic Association,
2 Karnataka Amateur Archery Association,
3 Karnataka Atya Patya Association
4 Karnataka Amateur Body Builders Association,
5 Karnataka Badminton (Shuttle) Association,
6 Karnataka Ball Badminton Association,
7 Karnataka State Billiards Association,

8 Karnataka State Basketball Association,
9 Karnataka State Bridge Association,
10 Karnataka Amateur Boxing Association,
11 The National Association for the Blind,
12 Karnataka State Carrom Association,
13 Karnataka Amateur Cycling Association,
14 Karnataka State Cricket Association,
15 Karnataka Ladies Cricket Association,
16 Karnataka Chess Association,
17 The Association of the Deaf,
18 Karnataka Women's Football Association,
19 Karnataka State Football Association,
20 Karnataka State Gymnastic Association,
21 Karnataka State Women's Hockey Association,
22 Karnataka State Hockey Association,
23 Karnataka Amateur Handball Association,
24 Karnataka Judo Association,
25 Karnataka Karate-Do Association,
26 Karnataka Kho-Kho Association,
27 Karnataka Rajya Amateur Kabaddi Association,
28 Karnataka State Lawn-Tennis Association,
29 Karnataka Mountaineering Council,
30 Karnataka Olympic Association,
31 Karnataka Power-Lifting Association,
32 The National Society for Equal Opportunity for the Handicapped
33 Karnataka State Riffle Association,
34 Karnataka Roller Skating Association,
35 Karnataka Softball Association,
36 Karnataka Shooting Ball Association,
37 Karnataka State Swimming Association,
38 Karnataka Table Tennis Association,
39 Karnataka Tennikoit Association,
40 Karnataka Throwball Association,
41 Karnataka Volleyball Association,
42 Karnataka Veterns Athletic Association,
43 Karnataka Wrestling Association,
44 Karnataka Weight Lifters Association,
45 Karnataka Yoga Association,
46 Karnataka Tug-of-War Association,
47 Karnataka Sepak Takraw Association,
48 Karnataka Tae Know Do Association,
49 Karnataka Mallakhamba Association.

50 Karnataka State Baseball Association,
51 Karnataka Rowing Association,

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ —ಮಾನ್ಯ ಅಧ್ಯಕ್ಷರೇ, ೩೬ ಕ್ರೀಡಾ ಸಂಸ್ಥೆಗಳಿಗೆ ಕೊಟ್ಟಿರುವ ಧನ ಸಹಾಯ ೧೯೮೫-೮೬ ರಲ್ಲಿ ೧೦,೩೯,೪೪೦ ರೂಪಾಯಿಗಳಷ್ಟಿದೆ, ೮೬-೮೭ನೇ ಸಾಲಿಗೆ ೩೦ ಕ್ರೀಡಾ ಸಂಸ್ಥೆ ೬,೮೦,೩೭೦-೯೬ ಹಾಗೂ ೮೭-೮೮ನೇ ಸಾಲಿನಲ್ಲಿ ೧೯ ಸಂಸ್ಥೆಗಳಿಗೆ ೩,೩೫,೭೧೦-೩೫ ರೂಪಾಯಿಗಳನ್ನು ನೀಡಲಾಗಿದೆ. ೮೫-೮೬, ಸಾಲಿಗಿಂತ ೮೬-೮೭ ಹಾಗೂ ೮೭-೮೮ ಸಾಲಿನಲ್ಲಿ ಧನ ಸಹಾಯ ಕಡಿಮೆ ಆಗಲಿಕ್ಕೆ ಕಾರಣ ಏನು ? ಸಹಾಯಧನ ಸಂಹಿತೆಯ ನಿಯಮದ ಪ್ರಕಾರ ಆರ್ಥಿಕ ವ್ಯವಹಾರಗಳನ್ನು ನಿಯಂತ್ರಿಸಲಾಗುವುದು ಎಂದು ತಿಳಿಸಿದ್ದೀರಿ ಅಂದರೆ ಇದರ ಬಗ್ಗೆ ಆಡಿಟ್ ರಿಪೋರ್ಟ್‌ನ್ನು ನೋಡಿದ್ದೀರಾ ಅಥವಾ ಬೇರೆ ರೀತಿಯ ಅವ್ಯವಹಾರಗಳು ಆಗುತ್ತಿವೆ ಎಂಬ ಬಗ್ಗೆ ಅಪಾದನೆಗಳು ಇವೆ, ಇವುಗಳನ್ನು ಅಕೌಂಟೆಂಟ್ ಜನರಲ್‌ರವರು ಆಡಿಟ್ ಮಾಡಿದ್ದಾರೆಯೇ ? ಮತ್ತು ನಾಲ್ಕು ಸಂಸ್ಥೆಗಳು ಸ್ವಂತ ಕ್ರೀಡಾಂಗಣವನ್ನು ಹೊಂದಿವೆ ಎಂದು ತಿಳಿಸಿದ್ದೀರಿ, ತಾವು ಪ್ರತಿಯೊಂದು ತಾಲೂಕಿಗೂ ಒಂದು ಸ್ಟೇಡಿಯಂ ಕಟ್ಟುವಂತಹ ಒಂದು ಆಶ್ವಾಸನೆಯನ್ನು ಕೊಟ್ಟಿದ್ದೀರಿ. ರಾಜ್ಯ ಫುಟ್‌ಬಾಲ್ ಸ್ಟೇಡಿಯಂ ಜಾಗವನ್ನು ಪ್ರೈವೇಟ್ ಪಾರ್ಟಿಗೆ ಕೊಟ್ಟಿದ್ದೀರಿ ಎಂಬ ಅಪಾದನೆ ಇದೆ. ಈ ಬಗ್ಗೆ ವಿವರಗಳನ್ನು ಕೇಳಬಯಸುತ್ತೇನೆ ಅದು ಅಲ್ಲಿದೇ ಕೇಂದ್ರ ಸರ್ಕಾರದಿಂದ ನಿಳ ಎಕರೆ ಸ್ಥಳವನ್ನು ಸಿಂಥೆಟಿಕ್ ಟ್ರಾಕ್ ಮಾಡಲಿಕ್ಕೆ ಯೂನಿವರ್ಸಿಟಿಯವರು ಕೇಳಿರುತ್ತಾರೆ. ಆ ಜಾಗವನ್ನು ಏತಕ್ಕೆ ಕೊಡಲಿಲ್ಲ ಎನ್ನುವುದನ್ನು ಕೇಳುವುದಕ್ಕೆ ಇಚ್ಛಿಪಡುತ್ತೇನೆ.

ಶ್ರೀ ರಮೇಶ್ ಸಿ ಜಿಗಜಿಣಗಿ —ಮಾನ್ಯ ಅಧ್ಯಕ್ಷರೇ, ೮೬-೮೭, ೮೭-೮೮ನೇ ಸಾಲಿಗೆ ಹಣವನ್ನು ತಾವು ಕಡಿಮೆ ಕೊಟ್ಟಿದ್ದೀರಿ ಎಂದು ಮಾನ್ಯ ಸದಸ್ಯರು ಕೇಳಿದ್ದಾರೆ. ಆದಕ್ಕೆ ಕಾರಣ ಹೇಳುವುದಾದರೆ, ಅದಕ್ಕೆ ಒಂದು ನಿರ್ದಿಷ್ಟವಾದರೂ ಏನೂ ಇಲ್ಲ. ಅದಕ್ಕಿಂತ ಹೆಚ್ಚಿನ ಕಾರಣಗಳು ಬೇರೆ ಇರುತ್ತವೆ. ಕೆಲವೊಂದು ಕಡೆ ಜಾಸ್ತಿ ಡಿವ್ಯಾಂಡ್ ಇರುವುದರಿಂದ ಬಹಳ ಜನರು ಕೇಳಿರುವಂತಹ ಸಂದರ್ಭಗಳೂ ಇವೆ. ಇಂತಹ ಸಮಯದಲ್ಲಿ ಇಲಾಖೆಯ ಆರ್ಥಿಕ ವ್ಯವಸ್ಥೆಯನ್ನು ನೋಡಿಕೊಂಡು ಹಣವನ್ನು ಕ್ರೀಡಾ ಸಂಸ್ಥೆಗಳಿಗೆ ಕೊಡಬೇಕಾಗುತ್ತದೆ ಸಹಾಯಧನದ ಸಂಹಿತೆ ಪ್ರಕಾರ, ಮಿಸ್ ಅಪ್ರೊಪ್ರಿಯೇಷನ್ ಆಗುತ್ತದೆ ಎನ್ನುವ ಆಪಾದನೆಯನ್ನು ಹೇಳುತ್ತಿದ್ದಾರೆ ನಾನು ಸಂಪೂರ್ಣವಾಗಿ ಅಲ್ಲಗೆಳೆಯುವುದಿಲ್ಲ ಆದರೆ ನಮಗೆ ಏನು ಇರುತ್ತದೆ ಮಿಸ್ ಅಪ್ರೊಪ್ರಿಯೇಷನ್ ಅನ್ನು ಒಂದು ಅಲ್ಲಿ ನಿರ್ದಿಷ್ಟವಾದ ಅಕೌಂಟಿಗೆ ನಾವು ಹಣವನ್ನು ಜಮಾ ಮಾಡಿರುತ್ತೇವೆ ೯೦ ದಿನಗಳಲ್ಲಿ ಮೆಟೀರಿಯಲ್‌ಗಳನ್ನು ಪರ್ಚೆಸ್ ಮಾಡಿ ಒಂದು ರಸೀದಿಯನ್ನು ಇಲಾಖೆಗೆ ಕೊಡುತ್ತಾರೆ. ಅವರು ೯೦ ದಿನಗಳಲ್ಲಿ ರಸೀದಿ ಕೊಡದೇ ಇದ್ದರೆ ನಾವು ಕಾನೂನು ಪ್ರಕಾರ ಕ್ರಮ ತೆಗೆದುಕೊಳ್ಳುತ್ತೇವೆ. ಮೂರನೇ ಪ್ರಶ್ನೆ ಅಂದರೆ ಫುಟ್‌ಬಾಲ್ ಸಂಸ್ಥೆಯ ಒಂದು ಜಾಗವನ್ನು ಬಿಲ್ಡರ್ಸ್‌ಗಳಿಗೆ ಕೊಟ್ಟಿದ್ದೀರಿ ಎಂದು ಅವರು ಕೇಳುತ್ತಿದ್ದಾರೆ. ಆದರ ಬಗ್ಗೆ ಸಧ್ಯಕ್ಕೆ ನನ್ನ ಹತ್ತಿರ ಮಾಹಿತಿ ಇಲ್ಲ, ಅದನ್ನು ಮಾನ್ಯ ಸದಸ್ಯರಿಗೆ ಕೊಟ್ಟು ಕಳಿಸುತ್ತೇನೆ.

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ. —ಮಾನ್ಯ ಅಧ್ಯಕ್ಷರೇ, ಮಾನ್ಯ ರಾಮಕೃಷ್ಣ ಹೆಗಡೆಯವರು ಒಂದು ವಿಚಾರವನ್ನು ಹೇಳಿದರು. ನಗರ ಭಾರತ ಮತ್ತು ಗ್ರಾಮೀಣ ಭಾರತ ಎನ್ನುವಂತಹ ಒಂದು ಹೇಳಿಕೆಯನ್ನು ಕೊಟ್ಟಿರತಕ್ಕಂತ ಮಂಖ್ಯಮಂತ್ರಿಯವರ ಈ ಸರ್ಕಾರದಲ್ಲಿ ಗ್ರಾಮೀಣ ಪ್ರದೇಶಗಳಿಗೆ ಈ ಕೆಲಸಗಳಲ್ಲಿ ಯಾವ ಆದ್ಯತೆಯನ್ನು ಕೊಟ್ಟಿದ್ದೀರಿ ಮತ್ತು ೫೪ ಕ್ರೀಡಾ ಸಂಸ್ಥೆಗಳಲ್ಲಿ ಕೆಲವು ಲೆಟರ್‌ಹೆಡ್ ಸಂಸ್ಥೆಗಳು ಮಾತ್ರ. ಕೆಲವು ಕಾರ್ಯ ನಿರ್ವಹಿಸುತ್ತಾ ಇಲ್ಲ. ಗ್ರಾಮೀಣ ಪ್ರದೇಶಗಳಲ್ಲಿ ಯಾವ ಆದ್ಯತೆಯನ್ನೂ ಕೊಡ ತ್ತಾ ಇಲ್ಲ. ಕರ್ನಾಟಕ ಕ್ರಿಕೆಟ್ ಅಸೋಸಿಯೇಷನ್, ಬೆಂಗಳೂರಿನಲ್ಲಿ ರಣಜಿ ಟ್ರೋಫಿ, ಒಂದರೆಡು ಟೆಸ್ಟ್‌ಗಳು ನಡೆದಿರುವುದಾದರೂ, ಗ್ರಾಮಾಂತರ ಪ್ರದೇಶಗಳಲ್ಲಿ ಯಾವ ಯಾವ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೀರಿ ? ಅವುಗಳಿಗೆ ಎಷ್ಟು ಸಹಾಯ ಧನವನ್ನು ಕೊಟ್ಟಿದ್ದೀರಿ ಎನ್ನುವುದನ್ನು ಕೇಳಬಯಸುತ್ತೇನೆ

ಶ್ರೀ ರಮೇಶ್ ಸಿ ಜಿಗಜಿಣಗಿ — ಗ್ರಾಮಾಂತರ ಪ್ರದೇಶಗಳಲ್ಲಿ ಎಷ್ಟು ಕ್ರೀಡಾ ಸಂಸ್ಥೆಗಳಿಗೆ ಹಣವನ್ನು ಕೊಟ್ಟಿದ್ದಾರೆ ಎಂದು ಕೇಳಿದ್ದಾರೆ. ಅದರ ವಿವರ ನನ್ನ ಹತ್ತಿರ ಇಲ್ಲ, ಮಾನ್ಯ ಸದಸ್ಯರಿಗೆ ಅದನ್ನು ಕಳುಹಿಸಿ ಕೊಡುತ್ತೇನೆ ಮಾನ್ಯ ಸದಸ್ಯರು ಹೇಳಿದರು ಪ್ರತಿಯೊಂದು ತಾಲ್ಲೂಕಿಗೆ ಒಂದು ಕ್ರೀಡಾಂಗಣವನ್ನು ನೀವು ಮಾಡುತ್ತೀರಿ ಎಂದು ಹೇಳಿದ್ದಾರೆ, ಅದು ನಿಜ, ಅದನ್ನು ಒಂದೇ ಸಲಕ್ಕೆ ಮಾಡಲಾಗುವುದಿಲ್ಲ. ಹಂತ ಹಂತವಾಗಿ ಈ ಕಾರ್ಯಕ್ರಮವನ್ನು ಕೈಗೊಳ್ಳಲಾಗುತ್ತದೆ.

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ —ಸಿ ವರ್ಷಗಳಿಂದ ಎಷ್ಟು ಕ್ರೀಡಾ ಸಂಸ್ಥೆಗೆ ಹಣವನ್ನು ಕೊಟ್ಟಿದ್ದೀರಿ ಅದಕ್ಕೆ ಒಂದೂ ಉತ್ತರ ಇಲ್ಲ.

ಶ್ರೀ ರಮೇಶ್ ಸಿ. ಜಿಗಜಿಣಗಿ.—ವಿವರಗಳನ್ನು ಮಾನ್ಯ ಸದಸ್ಯರಿಗೆ ಕಳುಹಿಸಿಕೊಡುತ್ತೇನೆ. ಇವೊತ್ತೇ ಬೇಕಾದರೆ ಕಳಿಸಿಕೊಡುತ್ತೇನೆ.

ಶ್ರೀ ಎಂ.ಎನ್. ಅಡ್ಯಂತಾಯ -- ಮಾನ್ಯ ಮಂತ್ರಿಗಳಿಂದ ಉತ್ತರ ಬೇಳುವಾಗ ಲೀಸ್ ಕೊಟ್ಟಂತಹ ಸ್ಥಳದ ಮಾಹಿತಿ ನನ್ನ ಹತ್ತಿರ ಇಲ್ಲ ಎಂದರು. ರಾಜ್ಯ ಫುಟ್‌ಬಾಲ್ ಸಂಸ್ಥೆಗೆ ಕೊಟ್ಟಂತಹ ಜಾಗವನ್ನು ಬೇರೆ ಸಂಸ್ಥೆಗೆ ಲೀಸ್ ಕೊಟ್ಟಿದ್ದಾರೆ. ಫುಟ್‌ಬಾಲ್ ಸಂಸ್ಥೆಯ ಜಾಗವನ್ನು ಬೇರೆಯವರಿಗೆ ಕೊಟ್ಟದ್ದು ಜನಜನಿತವಾದ ವಿಷಯವಾಗಿದೆ. ಆದ್ದರಿಂದ ನಾನು ಸ್ಪೆಸಿಫಿಕ್ ಆಗಿ ಮಂತ್ರಿಗಳಲ್ಲಿ ಕೇಳಬಯಸುವುದೇನೆಂದರೆ ಯಾವುದಾದರೂ ಒಂದು ಬಿಲ್ಡರ್ಸ್‌ಗೆ ಈ ಫುಟ್‌ಬಾಲ್ ಸಂಸ್ಥೆಯ ಜಾಗವನ್ನು ಲೀಸ್‌ಗಾಗಿ ಕೊಟ್ಟಿದ್ದೀರಾ ?

೨-೩೦ ಪಿ. ಎಂ.

ನನ್ನ ಎರಡನೆಯ ಪ್ರಶ್ನೆ ಏನೆಂದರೆ, ಇದರ ಜೊತೆಗೆ ಇನ್ನೂ ಎಷ್ಟು ಸ್ಪೇಡಿಯಂ ಜಾಗಗಳನ್ನು ನಮ್ಮ ರಾಜ್ಯದಲ್ಲಿ ಖಾಸಗಿ ಬಿಲ್ಡರ್ಸ್‌ಗೆ ಲೀಸ್ ಮೇಲೆ ಕೊಟ್ಟಿದ್ದೀರೆಂಬುದನ್ನು ತಿಳಿಸಬೇಕು ? ಇದರ ಜೊತೆಗೆ ಕಬ್ಬನ್‌ಪಾರ್ಕ್ ಮತ್ತು ವಿಧಾನ ಸೌಧವನ್ನು ಸಹ ಲೀಸ್ ಮೇಲೆ ಕೊಡುವ ಆಲೋಚನೆ ಏನಾದರೂ ಇದೆಯೇ ಎಂದು ಕೇಳುತ್ತೇನೆ ?

ಶ್ರೀ ಆರ್. ಸಿ. ಜಿಗಜಿಣಗಿ.—ಈ ಸ್ಪೇಡಿಯಂಗಳನ್ನು ಲೀಸ್ ಮೇಲೆ ಕೊಡಂಶ್ತೀರಾ ಎಂದು ಕೇಳಿದ್ದಾರೆ ಆದರೆ ನಾವ ಯಾವುದನ್ನೂ ಲೀಸ್ ಮೇಲೆ ಕೊಡುವುದಿಲ್ಲ. ಈ ಪ್ರಶ್ನೆ ಇಲ್ಲಿ ಕೇಳಿರುವಂತಹ ಪ್ರಶ್ನೆಯಲ್ಲಿ ಬರುವುದಿಲ್ಲ. ಆದ್ದರಿಂದ ಬೇರೆ ಪ್ರಶ್ನೆ ಕೇಳಿದರೆ ನಾನು ಉತ್ತರ ತರಿಸಿಕೊಡುತ್ತೇನೆ. ಮಾನ್ಯ ಸದಸ್ಯರು ಫುಟ್‌ಬಾಲ್ ಸಂಸ್ಥೆಯ ಬಗ್ಗೆ ವಿವರ ಕೇಳಿದ್ದಾರೆ. ನಾನು ಅವರಿಗೆ ವಿವರಗಳನ್ನು ಕಳುಹಿಸಿಕೊಡುತ್ತೇನೆ.

ಶ್ರೀ ಎನ್. ಎಂ. ಅಡ್ಯಂತಾಯ.—ನಾನು ಮೂಲ ಪ್ರಶ್ನೆಗೆ ಸಂಬಂಧಪಟ್ಟಂತೆ ಪ್ರಶ್ನೆ ಕೇಳಿದ್ದೇನೆ ಆದ್ದರಿಂದ ಉತ್ತರ ಏತಕ್ಕೆ ಕೊಡಬಾರದು ?

ಅಧ್ಯಕ್ಷರು.—ಅವರು ಉತ್ತರ ಕೊಟ್ಟಿದ್ದಾರೆ,

ಶ್ರೀ ಎನ್. ಎಂ. ಅಡ್ಯಂತಾಯ.—ನಾನು ನಿರ್ದಿಷ್ಟವಾದ ಪ್ರಶ್ನೆಯನ್ನು ಕೇಳಿದಾಗಲೂ ಸಹ ಈ ರೀತಿ ಹಾರಿಕೆ ಉತ್ತರ ಕೊಟ್ಟರೆ ಹೇಗೆ ? ಒಂದೊಂದು ನಿಮಿಷ ಇಲ್ಲಿ ಸಭೆ ನಡೆಸಲು ನಾವು ಸರ್ಕಾರದ ಬೊಕ್ಕಸದಿಂದ ಇಷ್ಟೊಂದು ಹಣ ಖರ್ಚು ಮಾಡುತ್ತಿರುವಾಗ ಮಾನ್ಯ ಮಂತ್ರಿಗಳು ಹಾರಿಕೆ ಉತ್ತರ ಕೊಡುವುದು ಸರಿಯೇ ? ಇವರು ಏನಾದರೂ ಕರ್ನಾಟಕ ರಾಜ್ಯವನ್ನೇ ಮಾರಾಟ ಮಾಡಲು ಹೊರಟಿದ್ದಾರೆಯೇ ಹೇಗೆ ?

(ಗೊಂದಲ)

ಅಧ್ಯಕ್ಷರು.—ಮಾನ್ಯ ಅಡ್ಯಂತಾಯ ಅವರು ಮತ್ತು ಮಾನ್ಯ ಪ್ರತಾಪಚಂದ್ರ ಶೆಟ್ಟಿ ಅವರು ಈಗ ಏನು ಹೇಳಿದರೂ ಸಹ ಅದು ರೆಕಾರ್ಡ್ ಆಗುವುದಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಮಾನ್ಯ ಸದಸ್ಯರು ರಾಜ್ಯ ಫುಟ್‌ಬಾಲ್ ಸಂಸ್ಥೆಯ ಬಗ್ಗೆ ನೇರವಾದ ಪ್ರಶ್ನೆ ಕೇಳಿರುವುದರಿಂದ ಮಾನ್ಯ ಮಂತ್ರಿಗಳು ಸಹ ನೇರವಾಗಿ ಉತ್ತರ ಕೊಡಬೇಕಾಗುತ್ತದೆ

ಅಧ್ಯಕ್ಷರು.—ಅವರು ಕಬ್ಬನ್ ಪಾರ್ಕ್ ಹಾಗೂ ವಿಧಾನ ಸೌಧದ ಬಗ್ಗೆಯೂ ಹೇಳಿದರಂ. ಅದಕ್ಕೆ ಅವರು ಆ ರೀತಿ ಹೇಳಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಅವರು ಫುಟ್‌ಬಾಲ್ ಸಂಸ್ಥೆಯ ಬಗ್ಗೆ ನೇರವಾಗಿ ಪ್ರಶ್ನೆ ಕೇಳುವಾಗ ಬೇರೆ ವಿಚಾರ ಹೇಳಿರಬಹುದು. ಆದರೆ ಮೂಲ ಪ್ರಶ್ನೆಗೆ ಏತಕ್ಕೆ ಉತ್ತರ ಕೊಡಬಾರದು?

ಶ್ರೀ ಆರ್. ಸಿ. ಜಿಗಜಿಣಗಿ.—ನಾನು ನೇರವಾಗಿ ಉತ್ತರ ಕೊಟ್ಟಿದ್ದೇನೆ. ಅವರು ಕೇಳಿರುವ ಪ್ರಶ್ನೆಗೆ ನನ್ನಲ್ಲಿ ಮಾಹಿತಿ ಇದೆ. ಅದನ್ನು ನಾನು ಇವೊತ್ತೇ ಮಾನ್ಯ ಸದಸ್ಯರಿಗೆ ಕಳುಹಿಸಿಕೊಡುತ್ತೇನೆಂದು ಈಗಾಗಲೇ ಹೇಳಿದ್ದೇನೆ.

ಶ್ರೀ ಎನ್. ಎಂ. ಅಡ್ಯಂತಾಯ. —ಈ ರೀತಿ ಉತ್ತರ ಕೊಟ್ಟರೆ ನಾವು ಇದರ ಮೇಲೆ ಅರ್ಧ ಗಂಟೆ ಕಾಲದ ಚರ್ಚೆಗೆ ಬರೆದಂಕೊಡಬೇಕಾಗುತ್ತದೆ.

ಅಧ್ಯಕ್ಷರು.—ನೀವು ಬರೆದುಕೊಡಿ. ಶ್ರೀ ಯಡಿಯೂರಪ್ಪನವರ ಪ್ರಶ್ನೆಗೆ ಮಂತ್ರಿ ಶ್ರೀ ಲಕ್ಕಪ್ಪ ನವರ ಪ್ರಶ್ನೆಗೆ ಉತ್ತರ ಕೊಡಲು ಸಮಯ ಬೇಕೆಂದು ಸರ್ಕಾರದವರು ಕೇಳಿಕೊಂಡಿದ್ದಾರೆ. ಆದ್ದರಿಂದ ಈ ಪ್ರಶ್ನೆಗಳನ್ನು ತಡೆಹಿಡಿಯಲಾಗಿದೆ. ಈಗ ಮಾನ್ಯ ಬಸವಲಿಂಗಪ್ಪನವರು ತಮ್ಮ ಪ್ರಶ್ನೆಯನ್ನು ಕೇಳಬಹುದು.

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ನಿವೇಶನಗಳನ್ನು ಹಂಚಿರುವ ಬಗ್ಗೆ.

೧೩೪೪. ಶ್ರೀ ಬಿ. ಬಸವಲಿಂಗಪ್ಪ (ಯಲಹಂಕ).—ಮಾನ್ಯ ವಾರ್ತಾ ಪ್ರಸಾರೋದ್ಯಮ ಸಂಸ್ಕೃತಿ ಮತ್ತು ಬೆಂಗಳೂರು ಅಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ೧೯೮೬ ರಿಂದೀಚೆಗೆ ನಿರ್ಮಾಣ ಮಾಡಿದ ನಿವೇಶನಗಳ ಸಂಖ್ಯೆ ಎಷ್ಟು ?

(ಅಳತೆವಾರು ವಿವರಗಳನ್ನು ಒದಗಿಸುವುದು)

ಆ) ಈ ಅವಧಿಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರಿಗೆ ಹಂಚಿಕೆ ಮಾಡಲಾದ ನಿವೇಶನಗಳ ಸಂಖ್ಯೆ ಎಷ್ಟು ?

(ಅಳತೆವಾರು ನಿವೇಶನಗಳ ವಿವರಗಳನ್ನು ಒದಗಿಸುವುದು)

ಇ) ೧೯೮೩ರ ಮೊದಲು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರಿಗೆ ನಿವೇಶನ ಬೆಲೆಯನ್ನು ಆರು ಕಂತಿಂಗಳಲ್ಲಿ ಪಾವತಿ ಮಾಡುವ ಬಗ್ಗೆ ರಿಯಾಯಿತಿ ನೀಡಿ ಹೊರಡಿಸಿದ ಸರ್ಕಾರಿ ಆಜ್ಞೆಯನ್ನು ೧೯೮೩ರ ನಂತರವೂ ಅನುಸರಿಸಲಾಗುತ್ತಿದೆಯೇ ?

ಶ್ರೀ ಎ. ಪಿ. ಪ್ರಕಾಶ್.—(ವಾರ್ತಾ ಪ್ರಸಾರೋದ್ಯಮ ಮತ್ತು ಸಂಸ್ಕೃತಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಸಚಿವರು). —

ಅ) ೧೯೮೬ ರಿಂದೀಚೆಗೆ ೧೭,೦೧೬ ನಿವೇಶನಗಳನ್ನು ನಿರ್ಮಾಣ ಮಾಡಲಾಗಿದೆ.

(ಅಳತೆವಾರು ವಿವರಗಳ ಪಟ್ಟಿಯನ್ನು ಲಗತ್ತಿಸಲಾಗಿದೆ.)

ಆ) ೪,೪೧೬ ನಿವೇಶನಗಳು.

(ಪಟ್ಟಿ ಲಗತ್ತಿಸಲಾಗಿದೆ)

ಇ) ಇಲ್ಲ.

ಶ್ರೀ ಬಿ. ಬಸವಲಿಂಗಪ್ಪ.—ಇಲ್ಲಿ ನನ್ನ ಎರಡನೇ ಪ್ರಶ್ನೆಗೆ ಉತ್ತರವಾಗಿ ೪೪೧೬ ನಿವೇಶನಗಳು ಎಂದು ಹೇಳಿದ್ದಾರೆ. ಇದಕ್ಕೆ ಸಂಬಂಧಪಟ್ಟಂತೆ ಅಳತೆವಾರು ನಿವೇಶನಗಳ ವಿವರಗಳನ್ನು ಇಲ್ಲಿ ಒದಗಿಸಿದ್ದಾರೆ. ಇದರಲ್ಲಿ ಇಪ್ಪತ್ತು ಅಡಿ ಮತ್ತು ೩೦ ಅಡಿ ಅಳತೆಯ ೨೨೮೪ ಸೈಟ್‌ಗಳನ್ನು ಪರಿಶಿಷ್ಟ ಜಾತಿಯವರಿಗೆ ಕೊಡಲಾಗಿದೆ ಎಂದು ಹೇಳಿದ್ದಾರೆ. ಈ ಅಳತೆಯ ಸೈಟ್‌ಗಳನ್ನು ಲಿಂಗರಾಜಪುರದ ಕೆರೆಯ ಮೈದಾನದಲ್ಲಿ ನಿರ್ಮಿಸಿದ್ದಾರೆ. ಇದರ ಜೊತೆಗೆ ಇನ್ನಿತರ ಅಳತೆಗಳುಳ್ಳ ಸೈಟ್‌ಗಳನ್ನು ಸಹ ನಿರ್ಮಿಸಿ ಪರಿಶಿಷ್ಟ ಜಾತಿಯವರಿಗೆ ಹಂಚಿಕೆ ಮಾಡಿದ್ದೇವೆಂದು ಇಲ್ಲಿ ವಿವರಗಳನ್ನು ಕೊಟ್ಟಿದ್ದಾರೆ. ಇಲ್ಲಿ ಕೊಟ್ಟಿರುವ ವಿವರಗಳನ್ನು ನೋಡಿದಾಗ ಪರಿಶಿಷ್ಟ ಜಾತಿಯವರಿಗೆ ವಿಂಗಡಿಸಲಾತಿ ಪ್ರಕಾರ ಎಷ್ಟು ಸೈಟ್‌ಗಳನ್ನು ಕೊಡಬೇಕಾಗಿತ್ತೋ ಅಷ್ಟನ್ನು ಕೊಟ್ಟಂತೆ ಕಾಣುವುದಿಲ್ಲ. ತಾವು ಯೋಚನೆ ಮಾಡಿ. ಈಗ ನೀವು ಯಾವ ಯಾವ ಡೈಮನ್‌ಷನ್ ಸೈಟುಗಳನ್ನು ಕೊಟ್ಟಿದ್ದೀರಿ ಎಂದು ಪಟ್ಟಿಯಲ್ಲಿ ನೋಡಿ. ೬೦x೯೦ ಅಡಿ ಅಳತೆಯ ಸೈಟನ್ನು ಒಬ್ಬರಿಗೆ ಕೊಟ್ಟಿದ್ದೀರಿ. ಆ ಮಹಾನುಭಾವರು ಯಾರೋ ಗೊತ್ತಿಲ್ಲ. ಬೇರೆಯವರಿಗೆ ಎಷ್ಟು ಜನರಿಗೆ ಕೊಟ್ಟಿದ್ದೀರಿ ಅಂದರೆ ೫೦x೮೦ ಅಡಿ ಅಳತೆಯ ಸೈಟುಗಳನ್ನು ೮೫